(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ನನ್ನ ಒರಿಜನಲ್ ಪ್ರಶ್ನೆಯನ್ನು ನೋಡಿ, ಅದನ್ನು ನಾನು ಇಂಗ್ಲೀಷಿನಲ್ಲಿ ಬರೆದಿರಲಿಲ್ಲ, ಕನ್ನಡದಲ್ಲಿ ಬರೆದಿದ್ದೆ. ನನಗೆ ತೋಟಿ ತಳವಾರ ಹಾಗೂ ನೀರಗಂಟಿಗೆಳು ಇರುವುದು ಚೆನ್ನಾಗಿ ಗೊತ್ತಿದೆ. ನಾನು ದಡ್ಡ ಶಾಸಕನಲ್ಲ. ಆದರೆ ಈ ರೀತಿ ಬದಲಾಯಿಸಿದ್ದಾರೆ. ಆದುದರಿಂದ ನನಗೆ ರಕ್ಷಣೆ ಕೊಟ್ಟು ಪೂರ್ತಿ ಒರಿಜನಲ್ ಪ್ರಶ್ನೆ ಏನಿದೆ ಅದನ್ನು ಕೊಡಿಸಿಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ 3-4 ದಿವಸಗಳ ಕೆಳಗೆ ತಾವು ಇದೇ ರೀತಿ ಹೇಳಿದಿರಿ. ನಾನು ತಮ್ಮ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಹೋಗುವುದಿಲ್ಲ, ನನಗೆ ಬೇಕಾಗೂ ಇಲ್ಲ. ನಾವು ಇಲ್ಲಿ ಪ್ರಶ್ನೆಯನ್ನು ಆಡ್ಮಿಟ್ ಮಾಡಿದ ಮೇಲೆ ಅದರ ಕಾಪಿಯನ್ನು ತಮಗೆ ಕಳುಹಿಸುತ್ತೇವೆ ಆಗ ದಯಮಾಡಿ ತಾವು ಅದನ್ನು ನೋಡಬೇಕು. ಆ ರೀತಿ ನೋಡದೆ ನಮ್ಮ ಹಕ್ಕನ್ನು ಕಿತ್ತುಕೊಳ್ಳುತ್ತಾರೆ ಅಂದರೆ ಹೇಗೆ? ನಾನು ಈ ರೀತಿ ಪ್ರಶ್ನೆಯನ್ನು ಆಡ್ಮಿಟ್ ಮಾಡದೇ ಹೋಗಿದ್ದರೆ ತಮಗೆ ಉತ್ತರ ಬರುತ್ತಾ ಇರಲಿಲ್ಲ. ತಾವು ಜಾಣರು, ದಡ್ಡರು ಎನ್ನುವ ಪ್ರಶ್ನೆ ಅಲ್ಲ, ತಾವು ಬುದ್ಧಿವಂತರು ಎನ್ನುವುದು ಎಲ್ಲರಿಗೂ ಗೊತ್ತು. ತಾವು ಪ್ರಶ್ನೆ ಕಳುಹಿಸಿದ ಮೇಲೆ ಅದನ್ನು ನೋಡಬೇಕಾದದು ತಮ್ಮ ಕೆಲಸ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ ;— ದಯಮಾಡಿ ಅದಕ್ಕೆ ಉತ್ತರ ತರಿಸಿಕೊಡಬೇಕು

ಅಧ್ಯಕ್ಷರು : ಈ ಪ್ರಶ್ನೆಯನ್ನು ನೀವು ಕೇಳುವುದಿಲ್ಲತಾನೆ? ಹಾಗಾದರೆ ನಾನು ಬೇರೆ ಪ್ರಶ್ನೆಗೆ ಅವಕಾಶ ಮಾಡಿಕೊಡುತ್ತೇನೆ.

*Consultative Committees for Departments*

238. SRI J. L. KABADE (Ballolli).—

Will the Minister for Industrie ands Parliamentary Affairs be pleased to state :—

(*a*) when the G. O. regarding constitution of consultative Committees in respect of 19 Departments in the State was issued and the decision taken regarding the number of M. L. As. and M. L. Cs. in each Department ;

(*b*) the purpose of having consultative Committees in each Department;

(*c*) whether Government is always prepared to implement the decisions taken by these Committees;

(*d*) the number of Members who have suggested the constitution of these Committees;

(*e*) whether Members will be nominated to the Committees for which they have not expressed their desire?

Minister of State for small scale Industries On behalf of SRI S. M. KRISHNA (Minister for Industries and Parliamentary Affairs)

(*a*) This G. O. was issued on 6-9-1974. The Members of L. A. and L. C. will be appointed in respect of each department as follows:

| Sl. No. | Name of the Department | M.L.As. | M.L.Cs. |
|---|---|---|---|
| 1. | Revenue | 11 | 4 |
| 2. | Home (excluding Transport) | 11 | 3 |
| 3. | Transport | 10 | 3 |
| 4. | P. W. D. and Elcetricity | 11 | 4 |
| 5. | Commerce and Industries | 10 | 3 |
| 6. | Agriculture | 10 | 3 |
| 7. | Forests | 10 | 3 |
| 8. | Education | 11 | 3 |
| 9. | Development including Taluk Development Board and Panchayat | 11 | 4 |
| 10. | Housing Board | 10 | 3 |

(SRI S. M KRISHNA)

| 1 | 2 | 3 | 4 |
|---|---|---|---|
| 11. | Co-operation | 10 | 3 |
| 12. | Health | 10 | 3 |
| 13. | Municipal Administration | 11 | 3 |
| 14. | General Administration | 10 | 3 |
| 15. | Finance | 10 | 3 |
| 16. | Food and Civil Supplies | 10 | 3 |
| 17. | Social Welfare | 10 | 3 |
| 18. | Labour | 10 | 3 |
| 19. | Planning | 10 | 3 |

(*b*) Each Member can make suitable suggestion after studying in detail the working of the respective Department in such Committees.

(*c*) Generally they are accepted. The reasons for non-implementation will be intimated to the Committee.

(*d*) Only some members have expressed their views.

(*e*) The appointment will be made keeping in view the number of Members of the Committee and the suggestions of the Members.

ಶ್ರೀ ಜೆ. ಎಲ್. ಕಬಾಡೆ.—ಈ ಸಮಾಲೋಚನಾ ಸಮಿತಿಯನ್ನು ಎಷ್ಟು ಇಲಾಖೆಗಳಲ್ಲಿ ಈಗಾಗಲೇ ರಚಿಸಿದ್ದೀರಿ ?

† ಶ್ರೀ ಎಂ. ವೀರಪ್ಪ ಮೊಯ್ಲಿ.—ಸಾಧ್ಯವಾದ ಮಟ್ಟಿಗೆ ಬರೀ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಒಂದು ಸಮಿತಿ ಮಾತ್ರ ನೇಮಕವಾಗಿದೆ.

ಶ್ರೀ ಜೆ. ಎಲ್. ಕಬಾಡೆ.—ಕಳೆದ ವರ್ಷ ಈ ಸದನದಲ್ಲಿ ಆಶ್ವಾಸನೆ ಕೊಟ್ಟು ತೀವ್ರವಾಗಿ ಸಮಾಲೋಚನಾ ಸಮಿತಿಗಳನ್ನು ನೇಮಕ ಮಾಡುತ್ತೇವೆ ಎಂದು ಹೇಳಿದ್ದಾರೆ. ಈಗ ಮಾಡದೇ ಇರುವುದಕ್ಕೆ ಕಾರಣ ಏನು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಸಮಾಲೋಚನಾ ಸಮಿತಿಗಳನ್ನು ಮರುರಚನೆ ಮಾಡುವಾಗ ಈ ಸದನದ ಸದಸ್ಯರ ಅಭಿಪ್ರಾಯಗಳನ್ನು ತಿಳಿದು ಕೊಂಡೇ ರಚನೆ ಮಾಡಬೇಕು ಎನ್ನುವುದು ಸರ್ಕಾರದ ಅಭಿಪ್ರಾಯವಾಗಿದ್ದು, ಇದರ ಪ್ರಕಾರ ಸದಸ್ಯರಿಗೆ ಸುತ್ತೋಲೆಯನ್ನು ಕೂಡ ಕಳಿಸಿದೆ. ಅವರವರಿಗೆ ಯಾವ ಯಾವ ವಿಷಯದಲ್ಲಿ ಗೋಚರ ಇದೆಯೋ ಅದನ್ನು ತಿಳಿಸಬೇಕು ಎಂದು ಅದರಲ್ಲಿ ಹೇಳಿದೆ. ದುರದೃಷ್ಟವಶಾತ್ ಬರೀ 6 ಮಂದಿ ಮಾತ್ರ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಆದುದರಿಂದ ಈಗ ಸದನ ನಡೆಯುತ್ತಿರುವಾಗ ಬಹುಶಃ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದರೆ ಇದರಿಂದ ಬಹಳ ಅನುಕೂಲವಾಗುತ್ತದೆ. ಮತ್ತು ಸಮಿತಿಗಳನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡೆ.—ಆರು ಜನ ಸದಸ್ಯರುಗಳು ಮಾತ್ರ ತಮ್ಮ ಇಂಗಿತವನ್ನು ತಿಳಿಸಿದ್ದಾರೆ ಎಂದು ತಾವು ಹೇಳಿದಿರಿ. ಅವರು ಯಾರ್ಯಾರು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ :—ಇದರ ಬಗ್ಗೆ ನನ್ನ ಹತ್ತಿರ ಪಟ್ಟಿ ಇಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—19 ಇಲಾಖೆಗಳಿಗೆ ಸಮಾಲೋಚನಾ ಸಮಿತಿಗಳನ್ನು ನೇಮಿಸುತ್ತೇವೆ ಎಂದು ಹೇಳಿದ್ದೀರಿ. ಆಯಾಯ ಇಲಾಖೆಯ ಕಾರ್ಯಕಲಾಪಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ತಕ್ಕ ಸಲಹೆಗಳನ್ನು ನೀಡುವ ಉದ್ದೇಶದಿಂದ ತಾವು ಒಂದು ಬ್ರೀಫ್ ನೋಟನ್ನು ಆಯಾಯ ಇಲಾಖೆಗೆ ಕೊಟ್ಟಿದ್ದೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಸಮಾಲೋಚನಾ ಸಮಿತಿಗಳು ತಮ್ಮ ಕೆಲಸವನ್ನು ಪ್ರಾರಂಭ ಮಾಡಿದಮೇಲೆ ಬ್ರೀಫ್ ನೋಟ್ ಕೊಟ್ಟು ಕೆಲಸ ಮಾಡಬೇಕಾಗುತ್ತದೆ.

ಶ್ರೀ ಕೆ. ಎಫ್. ಪಾಟೀಲ್.—ಈ ಸಮಾಲೋಚನಾ ಸಮಿತಿಗಳನ್ನು ನೇಮಿಸಬೇಕೆಂದು ಒತ್ತಾಯಪಡಿಸುವವರಲ್ಲಿ ನಾನೂ ಒಬ್ಬನಾಗಿದ್ದೇನೆ. ಇದರಲ್ಲಿ ಕೆಲಸ ಮಾಡುವುದಕ್ಕೆ ಮನಸ್ಸು ಇಲ್ಲದ ಸದಸ್ಯರೂ ಇದ್ದಾರೆ. ಆದುದರಿಂದ ಅವರ ಯೋಗ್ಯತೆಯನ್ನು, ಅಭಿಪ್ರಾಯವನ್ನು ಗಮನಿಸಿ ನೇಮಕ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ :—ಈ ಅಭಿಪ್ರಾಯ ಸಂಗ್ರಹಿಸುವ ಉದ್ದೇಶ ಏನೆಂದರೆ, ಅವರವರಿಗೆ ಯಾವ ಯ್ಯಾವ ವಿಷಯದಲ್ಲಿ ಅಭಿರುಚಿ ಇದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಮತ್ತು ಈ ರೀತಿ ಅಭಿಪ್ರಾಯವನ್ನು ತಿಳಿದುಕೊಳ್ಳುವುದು ನವೂಲೋಚನಾ ಸಮಿತಿಗಳನ್ನು ನೇಮಿಸುವುದಕ್ಕೆ ಸುಲಭವಾಗ ತ್ತದೆ ಎನ್ನುವ ದೃಷ್ಟಿಯಿಂದ. ಸದಸ್ಯರು ಯಾವ ಯಾವ ವಿಷಯದಲ್ಲಿ ಜ್ಞಾನವನ್ನು ಪಡೆದಿರು ತ್ತಾರೋ ಅದರಂತೆ ಅವರನ್ನು ಆಯಾಯಾ ಸಮಿತಿಗಳಿಗೆ ಸೇರಿಸಿಕೊಳ್ಳಲಾಗುವುದು

ಶ್ರೀ ಎಂ. ಎಸ್. ಕೃಷ್ಣನ್ :—ಸ್ವಾಮಿ, ತಾವು ಈ ನಮಾಲೋಚನಾ ಸಮಿತಿಗಳ ತೀರ್ಮಾನಗಳನ್ನು ಸರ್ವೇ ಸಾಧಾರಣವಾಗಿ ಒಪ್ಪಿಕೊಳ್ಳುತ್ತೇವೆ ಮತ್ತೆ ಒಪ್ಪಿಕೊಳ್ಳದಿದ್ದರೆ ಕಾರಣಗಳನ್ನು ಮಾತ್ರ ತಿಳಿಸುತ್ತೇವೆ ಎಂದು ಹೇಳಿದ್ದೀರಿ. ಬರೀ ಕಾರಣಗಳನ್ನು ತಿಳಿಸಿದರೆ ಸಾಕಾಗದು. ಇದರಿಂದ ತೊಡಕುಗಳು ಉಂಟಾಗು ತ್ತವೆ. ಮತ್ತು ಸಮಿತಿಗಳನ್ನು ನೇಮಿಸಿರುವ ಉದ್ದೇಶಕ್ಕೆ ವಿರೋಧವಾಗುತ್ತದೆ. ಇದರಲ್ಲಿ ಬಹುಭಾಗ ಜನಗಳ ಪ್ರತಿನಿಧಿಗಳು ಇರುವುದರಿಂದ ಇದನ್ನು ಸೂಕ್ಷ್ಮ ತಿದ್ದು ಪಾಟು ಮಾಡಿಕೊಳ್ಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ ;—ಕೆಲವು ಸಮಸ್ಯೆಗಳು ಇರುತ್ತವೆ, ಮುಖ್ಯ ವಾಗಿ ಹಣಕಾಸಿಗೆ ಸಂಬಂಧಪಟ್ಟ ವಿಚಾರ ಇರುತ್ತದೆ, ಮತ್ತು ಎಕ್ಸ್‌ಟರ್ನಲ್ ಅಫೇರ್ಸ್. ಅಟಾಮಿಕ್ ಎನರ್ಜಿ, ಹಾಗೂ ಸ್ವಾಯತ್ತತೆ ಹೊಂದಿದ ಕಾರ್ಪೊ ರೇಷನ್‌ಗಳಿಗೆ ಸಂಬಂಧಪಟ್ಟ ವಿಚಾರ ಇರುತ ದೆ ಅಂತಹ ಕೆಲವು ಸೂಚನೆಗಳು ಬಂದರೆ ಅವನ್ನು ಕಾರ್ಯಗತ ವ್ಯಾಪಡಲಿಕ್ಕೆ ತೊಡಕುಗಳು ಇರುತ್ತವೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದರೆ ಉಳಕ್ಕೆ ಆ ಸಲಹೆಗಳನ್ನು ಕಾರ್ಯಗತ ಮಾಡ ಲಿಕ್ಕೆ ಆಗುವುದಿಲ್ಲ ಎನ್ನುವುದನ್ನು ಮಾನ್ಯ ಸದಸ್ಯರಿಗೆ ತಿಳಿಸಲಾಗುವುದು.

SRI A. R. BADARINARAYAN :—We are told that only one committee has been constituted. I want to know why other committees have not been constituted though there is a Government order dated 6-9-1974 ?

SRI M. VEERAPPA MOILY :—It is quite obvious because, we wanted to take opinion of all Member and then constitute the Committee so that we can rule out any problems that would arise out of it. Now all Members are in Bangalore and they can give their opinion after which we can constitute the Committees.

ಶ್ರೀ ಕೆ. ಎಫ್. ಪಾಟೀಲ್ :—ಈ ಸಮಾಲೋಚನಾ ಸಮಿತಿಗಳನ್ನು ನೇಮಿಸುವಾಗ ಯಾವ ಯಾವ ಸದಸ್ಯರು ಯಾವ ಯಾವ ವಿಷಯದಲ್ಲಿ ತಜ್ಞರಿದ್ದಾರೆ ಮತ್ತು ಯಾರು ಯಾರು ಯಾವ ಯಾವ ವಿಷಯದಲ್ಲಿ ಅಜ್ಞಾನವನ್ನು ಹೊಂದಿದ್ದಾರೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ :—ಅದು ಸ್ಪಷ್ಟವಾಗಿದೆ.

( ನಗು )

ಶ್ರೀ ಕೆ. ಎಫ್. ಪಾಟೀಲ್ :—ಸಭಾ ಸದಸ್ಯರು ಯಾವ ಯಾವ ವಿಷಯದಲ್ಲಿ ಅಭಿರುಚಿಯನ್ನು ಪಡೆದಿದ್ದಾರೆ ಎನ್ನುವುದು ಸರ್ಕಾರಕ್ಕೆ ಗೊತ್ತಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ :—ಮಾನ್ಯ ಸದಸ್ಯರ ಅಭಿರುಚಿಯನ್ನು ತಿಳಿದುಕೊಳ್ಳುವುದಕ್ಕೋಸ್ಕರವೇ ಅವರನ್ನು ತಮ್ಮಗಳ ಅಭಿಪ್ರಾಯವನ್ನು ತಿಳಿಸಿ ಎಂದು ಕೇಳಿರುವುದು. ಆದುದರಿಂದ ಅವರವರು ತಮ್ಮ ಅಭಿಪ್ರಾಯವನ್ನು ತಿಳಿಸಿದರೆ, ಅದರ ಮೇಲೆ ಸಮಿತಿಗಳಿಗೆ ಅವರನ್ನು ನೇಮಕ ಮಾಡಲಾಗುವುದು.

ಶ್ರೀ ಜೆ. ಎಲ್. ಕಬಾಡೆ :—ಕೆಲವು ಇಲಾಖೆಗಳಿಗೆ ವಿಧಾನ ಸಭೆಯಿಂದ 11 ಜನ, ವಿಧಾನ ಪರಿಷತ್ತಿನಿಂದ 4 ಜನ ಇರಬೇಕು ಏನು ನಿಗದಿ ಮಾಡಿದ್ದೀರಿ ಇದರಲ್ಲಿ ಕೇವಲ ಆಡಳಿತ ಪಕ್ಷದವರೇ ಇದ್ದು, ವಿರೋಧ ಪಕ್ಷದವರು ಇಲ್ಲದಂತಾಗಿದೆ. ಅದುದರಿಂದ ಇದನ್ನು ಸರಿಪಡಿಸಿ ವಿರೋಧ ಪಕ್ಷದವರನ್ನು ಇದರಲ್ಲಿ ಸೇರಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ :—ಮಾನ್ಯ ಸದಸ್ಯರ ಈ ಹೆದರಿಕೆ ಸರಿಯಲ್ಲ.

## * INCREASING THE LIMIT ON SMALL SCALE INDUSTRIES

252 SRI BYRAPPAJI (Turuvekere)—

Will the Minister of State for Small Scale Industries be pleased to state :—

Whether it is a fact that a 7.5 lakh rupees limit has been imposed for the starting of small scale industries in the state ;